


ಮಾಧವ ಕುಲಕರ್ಣಿ

# ಫಕೀರ

ಕಲೆ: ಗುರು ನಾವಳ್ಳಿ

ಫಕೀರಪ್ಪ ಎಂದಿನಂತೆ ಬೆಳಿಗ್ಗೆ ಆರು ಗಂಟೆಗೇ ಎದ್ದು, ಮುಖ ತೊಳೆದು, ಒಂದು ಬೇವಿನ ಕಡ್ಡಿ ಬಾಯಲ್ಲಿ ನುರಿಸುತ್ತ ಹಳ್ಳಿಯ ಕೆರೆಯ ದಂಡೆಗೆ ಬಂದು ಕುಳಿತಿದ್ದ. ಮೊದಲಾಗಿದ್ದರೆ ಇವನಂತೆ ಬಹಳ ಜನ ಬಂದು ಕೂತು ಹರಟೆಯಲ್ಲಿ ತೊಡಗುತ್ತಿದ್ದರು. ಊರಲ್ಲಿ ಜನರೇ ಇಲ್ಲದಂತಾಗಿ ಕೆರೆಯದಂಡೆಗಳು ಖಾಲಿ, ಖಾಲಿ ಹೊಡೆಯುತ್ತಿದ್ದವು. ಬೇವಿನ ಕಡ್ಡಿಯಿಂದ ಹಲ್ಲುಜ್ಜುವ ಕಾರ್ಯಕ್ರಮ ಮುಗಿದ ಮೇಲೆ ಅವನು ಕೆರೆಯ ನೀರಿನಲ್ಲಿ ಬಾಯಿ ಮುಕ್ಕಳಿಸಿ, ಅಲ್ಲೇ ಒಂದು ಜಾಲಿ ಗಿಡದ ಕೆಳಗೆ ಅರ್ಧ ಒಡೆದ ತನ್ನ ಗಡಿಗೆಯನ್ನು ತಂದು ಅದರಲ್ಲಿ ನೀರು ತುಂಬಿಕೊಂಡು ಪಕ್ಕದ ಹೊಲದಲ್ಲಿ ಬಹಿರ್ದೆಶೆಗೆ ಹೋದ. ಮಳೆಯೇ ಇಲ್ಲದ್ದರಿಂದ ಹೊಲದಲ್ಲಿ ಬೆಳೆಯೂ ಇಲ್ಲ. ಈಗ ಅತ್ತಕಡೆ ಯಾರೂ ಸುಳಿಯದಿರುವುದರಿಂದ ಅವನಿಗೆ ಮರೆಮಾಡುವ ಜಾಗವನ್ನು ಹುಡುಕುವ ಜರೂರೇ ಇರಲಿಲ್ಲ.

ಫಕೀರಪ್ಪ ಮತ್ತೆ ಕೆರೆಗೆ ಬರುವ ಹೊತ್ತಗೆ ಕಳಕಪ್ಪ ಒಂದು ದಂಡೆಗೆ ಬಂದು ಕುಳಿತಿದ್ದ. ಅವನೂ ಬಾಯಲ್ಲಿ ಒಂದು ಬೇವಿನ ಕಡ್ಡಿ ಜಗಿಯುತ್ತ ಮುಖ ತೊಳೆದುಕೊಳ್ಳುತ್ತಿದ್ದ.